# ಶಾಲೆಯೊಂದು ನಕ್ಕರೆ...

(ರಾಯಚೂರು ತಾಲ್ಲೂಕಿನ ಕೆಲವು ಶಾಲೆಗಳ ಯಶೋಗಾಥೆ)



ಜಿಲ್ಲಾಡಳಿತ, ಜಿಲ್ಲಾ ಪಂಚಾಯ್ತಿ, ಸಾರ್ವಜನಿಕ ಶಿಕ್ಷಣಾ ಇಲಾಖೆ,
ಗ್ರಾಮ ವಿಕಾಸ, ಯುನಿಸೆಫ್ ಮಕ್ಕಳ ರಕ್ಷಣಾ ಯೋಜನೆ-ರಾಯಚೂರ

ರಾಯಚೂರ ಜಿಲ್ಲಾಡಳಿತ, ಜಿಲ್ಲಾ ಪಂಚಾಯ್ತಿ, ಯೂನಿಸೆಫ್ ಬೆಂಬಲಿತ ಜಿಲ್ಲಾ ಮಕ್ಕಳ ರಕ್ಷಣಾ ಯೋಜನೆ, ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು ಗ್ರಾಮ ವಿಕಾಸ ಸಂಸ್ಥೆ ಜಂಟಿಯಾಗಿ ತಾಲ್ಲೂಕಿನ ಶಾಲೆಗಳಲ್ಲಿರುವ ಶಾಲಾಭಿವೃದ್ಧಿ ಮತ್ತು ನಿರ್ವಹಣಾ ಸಮಿತಿಗಳನ್ನು (ಎಸ್‌ಡಿಎಂಸಿ) ಮತ್ತಷ್ಟು ಚುರುಕುಗೊಳಿಸಬೇಕು ಎನ್ನುವ ನಿಟ್ಟಿನಲ್ಲಿ ಹಲವಾರು ಯೋಜನೆಗಳನ್ನು ಹಾಕಿಕೊಂಡವು. ಎಸ್‌ಡಿಎಂಸಿ ಮತ್ತು ಸಮುದಾಯ ಮನಸ್ಸು ಮಾಡಿದಲ್ಲಿ ಶಾಲೆಗಳ ಅಭಿವೃದ್ಧಿ ಸುಲಭ ಎನ್ನುವ ಹಿನ್ನಲೆಯನ್ನು ಇಟ್ಟುಕೊಂಡು ಸದಸ್ಯರಿಗೆ ತರಬೇತಿಯನ್ನು ಏರ್ಪಡಿಸಲಾಯಿತು. ಜುಲೈ 3 ರಿಂದ ಸೆಪ್ಟೆಂಬರ್ 29, 2010ರವರೆಗೆ ವಿವಿಧೆಡೆ ನಡೆದ ತರಬೇತಿಯಲ್ಲಿ ತಾಲ್ಲೂಕಿನ 272 ಎಸ್‌ಡಿಎಂಸಿ ಸದಸ್ಯರು ಭಾಗವಹಿಸಿದ್ದರು. ಕಾರಣಾಂತರದಿಂದ 2 ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿನ ಎಸ್‌ಡಿಎಂಸಿ ಸದಸ್ಯರು ಈ ತರಬೇತಿ ಶಿಬಿರದಲ್ಲಿ ಭಾಗವಹಿಸಲಿಲ್ಲ.

### ತರಬೇತಿ:

- 266 ಶಾಲೆಗಳ ಎಸ್‌ಡಿಎಂಸಿ ಸದಸ್ಯರಿಗೆ ವ್ಯವಸ್ಥಿತ ರೀತಿಯಲ್ಲಿ ತರಬೇತಿ ನೀಡಲಾಯಿತು. ತರಬೇತಿಯ ಸಂದರ್ಭದಲ್ಲಿ ಒಟ್ಟಾರೆ ಮಕ್ಕಳ ಹಕ್ಕುಗಳ ಸಂರಕ್ಷಣೆಯ ಬಗ್ಗೆ ಅವರಿಗೆ ತಿಳಿ ಹೇಳಲಾಯಿತು. ಮಕ್ಕಳ ಹಕ್ಕುಗಳ ರಕ್ಷಣೆಯಲ್ಲಿ ಸಮುದಾಯ ಮತ್ತು ಎಸ್‌ಡಿಎಂಸಿ ಸದಸ್ಯರ ಪಾತ್ರವನ್ನು ಅವರಿಗೆ ಮನನ ಮಾಡಿಕೊಡಲಾಯಿತು. ಬಾಲಾಕಾರ್ಮಿಕ ಪದ್ಧತಿ ನಿಷೇಧ, ಬಾಲ್ಯ ವಿವಾಹ ನಿಷೇಧ ಮತ್ತು ಮಕ್ಕಳ ಅಕ್ರಮ ಸಾಗಣೆ ನಿಷೇಧದ ಅಗತ್ಯ ಏನು, ಅದರಲ್ಲಿ ಅವರ ಪಾತ್ರವೇನು ಎನ್ನುವುದನ್ನು ಅವರಿಗೆ ವಿವರವಾಗಿ ತಿಳಿಸಿಕೊಡಲಾಯಿತು. ಪಂಚಾಯತ್ ರಾಜ್ ಕಾಯಿದೆ, ಶಿಕ್ಷಣದ ಹಕ್ಕು ಕಾಯಿದೆ ಮತ್ತು ಮಾಹಿತಿ ಹಕ್ಕು ಕಾಯಿದೆಯಗಳ ಮಹತ್ವವನ್ನು ಶಿಬಿರಾರ್ಥಿಗಳಿಗೆ ಹೇಳಿಕೊಡಲಾಯಿತು.
- ಒಟ್ಟು 1753 ಎಸ್‌ಡಿಎಂಸಿ ಸದಸ್ಯರು, 266 ಶಾಲೆಗಳ ಮುಖ್ಯೋಪಾಧ್ಯಯರು ಮೇಲಿನ ತರಬೇತಿ ಶಿಬಿರಗಳಲ್ಲಿ ಭಾಗವಹಿಸಿದ್ದರು.
- 2011ರ ಜನವರಿ 26ರಂದು ರಾಯಚೂರ ನಗರದ ರಂಗಮಂದಿರದಲ್ಲಿ ಎಸ್‌ಡಿಎಂಸಿ ಮಹಿಳಾ ಸದಸ್ಯರ ಸಮಾವೇಶವನ್ನು ಹಮ್ಮಿಕೊಳ್ಳಲಾಗಿತ್ತು. 472 ಮಹಿಳಾ ಸದಸ್ಯರು ಒಂದು ದಿನದ ಈ ಸಮಾವೇಶದಲ್ಲಿ ಭಾಗವಹಿಸಿದ್ದರು.
- 2001ರ ಫೆಬ್ರುವರಿ 23ರಂದು ಎಸ್‌ಡಿಎಂಸಿ ವಿದ್ಯಾರ್ಥಿ ಸದಸ್ಯರ ಸಮಾವೇಶವನ್ನು ರಾಯಚೂರ ವಿಜ್ಞಾನ ಕೇಂದ್ರದಲ್ಲಿ ಏರ್ಪಡಿಸಲಾಗಿತ್ತು. 212 ವಿದ್ಯಾರ್ಥಿಗಳು ಈ ಸಮಾವೇಶದಲ್ಲಿ ಭಾಗವಹಿಸಿದ್ದರು. ಸಾರ್ವಜನಿಕ ಶಿಕ್ಷಣ ಇಲಾಖೆಯ ಸಂಯೋಗದಲ್ಲಿ ಎಸ್‌ಡಿಎಂಸಿ ವಿದ್ಯಾರ್ಥಿ ಸದಸ್ಯರ ಮೇಳವೊಂದನ್ನು ಹಮ್ಮಿಕೊಳ್ಳಬೇಕು ಎಂದು ಈ ಸಮಾವೇಶದಲ್ಲಿ ನಿರ್ಧರಿಸಲಾಯಿತು.
- ಮೇಲಿನ ತರಬೇತಿ ಹಾಗೂ ಸಮಾವೇಶಗಳಿಂದ ರಾಯಚೂರ ತಾಲ್ಲೂಕಿನ 49 ಶಾಲೆಗಳಲ್ಲಿರುವ ಎಸ್‌ಡಿಎಂಸಿಗಳು, ಸಮುದಾಯದ ನೆರವಿನಿಂದ ಈಗ ಚುರುಕಾಗಿ ಕಾರ್ಯ ನಿರ್ವಹಿಸುತ್ತಿವೆ.
- ಇದಾದ ನಂತರ ಹತ್ತು ಗ್ರಾಮ ಪಂಚಾಯ್ತಿಗಳಲ್ಲಿನ ಸಾರ್ವಜನಿಕ ಸೌಲಭ್ಯ ಸಮಿತಿ (ಸಿಎಸಿ)ಗಳ ಸಭೆ ನಡೆಯಿತು. ಆಯಾ ವ್ಯಾಪ್ತಿಯಲ್ಲಿ ಬರುವ ಶಾಲೆಗಳ ಅಭಿವೃದ್ಧಿ ಹಾಗೂ ನಿರ್ವಹಣೆಯ ಜವಾಬ್ದಾರಿ ಕೇವಲ ಎಸ್‌ಡಿಎಂಸಿಗೆ ಮಾತ್ರ ಸೇರಿಲ್ಲ. ಅದರ ಜೊತೆಯಲ್ಲಿ ಸಮುದಾಯ ಹಾಗೂ ಗ್ರಾಮ ಪಂಚಾಯ್ತಿ ಕೂಡ ಜವಾಬ್ದಾರಿಯನ್ನು ಹೊತ್ತು ತಮ್ಮ ತಮ್ಮ ವ್ಯಾಪ್ತಿಯಲ್ಲಿನ ಶಾಲೆಗಳ ಸರ್ವತೋಮುಖ ಅಭಿವೃದ್ಧಿಗೆ ಕಾರಣವಾಗಬೇಕು ಎಂಬ ನಿರ್ಧಾರ ಆ ಸಭೆಗಳಲ್ಲಿ ಮೂಡಿತು.
- ಮೇಲಿನೆಲ್ಲ ಪ್ರಯತ್ನಗಳಿಂದ ರಾಯಚೂರ ತಾಲ್ಲೂಕಿನ ಹಲವಾರು ಶಾಲೆಗಳಲ್ಲಿನ ಎಸ್‌ಡಿಎಂಸಿಗಳು ಚುರುಕಾಗಿವೆ. ಗ್ರಾಮ ಪಂಚಾಯ್ತಿ ಮತ್ತು ಎಸ್‌ಡಿಎಂಸಿ ಕೈಜೋಡಿಸಿ 3 ಗ್ರಾಮಗಳಲ್ಲಿ ಮಕ್ಕಳ ಗ್ರಾಮ ಸಭೆಯನ್ನು ಏರ್ಪಾಟು ಮಾಡಿದವು.

ಸುಮಾರು ಆರು ತಿಂಗಳ ಕಾಲ ನಿರಂತರವಾಗಿ ನಡೆದ ತರಬೇತಿ ಹಾಗೂ ಸಮಾವೇಶಗಳ ಪರಿಣಾಮವಾಗಿ ಬೇರು ಮಟ್ಟದಲ್ಲಿನ ಮನಸ್ಸುಗಳಲ್ಲಿ ಬದಲಾವಣೆ ಮೂಡಲಾರಂಭಿಸಿದೆ. ತಮ್ಮ ತಮ್ಮ ಹಳ್ಳಿಗಳಲ್ಲಿರುವ ಶಾಲೆಯೊಂದರ ಸ್ಥಿತಿ-ಗತಿಯೇ ಮುಂದೆ ತಮ್ಮ ಮಕ್ಕಳ ಭವಿಷ್ಯವನ್ನು ನಿರ್ಧರಿಸಲಿವೆ ಎಂಬ ಅಂಶವನ್ನು ಮನದಟ್ಟು ಮಾಡಿಕೊಡಲು ಮೇಲಿನ ಪ್ರಯತ್ನಗಳು ಸಹಕಾರಿಯಾದವು. ಅದರಲ್ಲಿಯಂತೂ ಭಾರತದಂತಹ ವಿಶಾಲವಾದ ದೇಶದಲ್ಲಿನ ಗ್ರಾಮೀಣ ಭಾಗದಲ್ಲಿರುವ ಶಾಲೆಗಳಲ್ಲಿನ ಪರಿಸ್ಥಿತಿ ನೇರವಾಗಿ ದೇಶದ ಭವಿಷ್ಯದ ಸಂಕೇತವಾಗಿರುತ್ತದೆ. ಈ ದೇಶ ಯಾವ ಹಂತದಲ್ಲಿದೆ ಮತ್ತು ಎತ್ತ ಸಾಗುತ್ತಿದೆ ಎಂಬ ಅಂಶವನ್ನು ಗ್ರಾಮೀಣ ಪ್ರದೇಶದಲ್ಲಿನ ಶಾಲೆಯನ್ನು ನೋಡಿ ಊಹಿಸಬಹುದು. ಆ ಹಿನ್ನಲೆಯಲ್ಲಿ ಹೇಳುವುದಾದರೆ ಗ್ರಾಮೀಣ ಪ್ರದೇಶದಲ್ಲಿರುವ ಭಾರತದ ಬಹುತೇಕ ಸರ್ಕಾರಿ ಪ್ರಾಥಮಿಕ, ಹಿರಿಯ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿನ ವಾತಾವರಣ ನಿರಾಸೆ ಹುಟ್ಟಿಸುತ್ತದೆ. ಹೆಚ್ಚಿನೆಲ್ಲ ಸಂದರ್ಭಗಳಲ್ಲಿ ವಿದ್ಯಾರ್ಥಿಗಳು ಸಂಖ್ಯೆ ಜಾಸ್ತಿಯಿದ್ದು, ಅವರ ಸಂಖ್ಯೆಗೆ ಅನುಗುಣವಾಗಿ ವಿಶಾಲವಾದ ಶಾಲಾ ಕೊಠಡಿಗಳು ಇರುವುದಿಲ್ಲ. ಅದರೊಂದಿಗೆ ಆ ಕೊಠಡಿಗಳು ಮತ್ತು ಶಾಲೆಯ ಆವರಣದಲ್ಲಿ ಸ್ವಚ್ಛತೆಯ ಕೊರತೆ ಎದ್ದು ಕಾಣುತ್ತಿರುತ್ತದೆ. ಇನ್ನು ಪರಿಶುದ್ಧವಾದ ವಾತಾವರಣ, ಕುಡಿಯುವ ನೀರು, ಶೌಚಾಲಯ ವ್ಯವಸ್ಥೆ ಮತ್ತು ಆಟದ ಬಯಲು ಎನ್ನುವುದು ಹೆಚ್ಚಿನ ಸಂದರ್ಭಗಳಲ್ಲಿ ಗಗನ ಕುಸುಮೇ ಸರಿ.

ಶಾಲೆಯೊಂದರ ಇಂತಹ ದುಸ್ಥಿತಿಗೆ ಸಂಪನ್ಮೂಲಕ ಕೊರತೆ, ಹಣದ ಕೊರತೆ, ಮಾನವ ಸಂಪನ್ಮೂಲದ ಕೊರತೆ ಮತ್ತು ಅಗತ್ಯ ಜ್ಞಾನದ ಕೊರತೆ... ಹೀಗೆ ಹಲವಾರು ಕಾರಣಗಳನ್ನು ನೀಡುವುದು ಸರ್ವೇ ಸಾಮಾನ್ಯ. ಆದರೆ, ಬೇರು ಮಟ್ಟದಲ್ಲಿ ಸ್ವಲ್ಪ ಮಟ್ಟದ ಪ್ರಯತ್ನ ನಡೆದರೆ, ಅಂತಹ ಪ್ರಯತ್ನ ನಡೆಯುವಂತಹ ವಾತಾವರಣವನ್ನು ಸೃಷ್ಟಿ ಮಾಡಿಕೊಟ್ಟರೆ ಬಹುತೇಕ ಸಮಸ್ಯೆಗಳು ಆ ಹಂತದಲ್ಲಿಯೇ ಪರಿಹಾರವಾಗುತ್ತದೆ ಎನ್ನುವುದು ಕೂಡ ನಿತ್ಯಸತ್ಯ. ರಾಯಚೂರು ತಾಲ್ಲೂಕಿನಲ್ಲಿ ನಡೆದ ಅಂತಹ ಕೆಲವು ಪ್ರಾಮಾಣಿಕ ಪ್ರಯತ್ನಗಳು ಮತ್ತು ಯಶೋಗಾಥೆ ಇಲ್ಲಿದೆ. ಈ ನಿಟ್ಟಿನಲ್ಲಿ ಜಂಟಿ ಪ್ರಯತ್ನ ನಡೆಸಿದ್ದು ರಾಯಚೂರ ಜಿಲ್ಲಾಡಳಿತ, ಜಿಲ್ಲಾ ಪಂಚಾಯ್ತಿ, ಯೂನಿಸೆಫ್ ಮಕ್ಕಳ ಸಂರಕ್ಷಣಾ ಯೋಜನೆ, ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು ಗ್ರಾಮ ವಿಕಾಸ ಸಂಸ್ಥೆ. ಪ್ರಾಯೋಗಿಕವಾಗಿ ಸ್ಥಳೀಯ ಸಂಸ್ಥೆಗಳಿಗೆ ಬೆಂಬಲ ನೀಡುವ ಮೂಲಕ ಬದಲಾವಣೆ ತರುವ ಜಂಟಿ ಯತ್ನ ಸಾಕಷ್ಟು ಫಲ ನೀಡಿದೆ ಎಂದೇ ಹೇಳಬೇಕು. ಬೇರು ಮಟ್ಟದಲ್ಲಿ ಗ್ರಾಮ ಪಂಚಾಯ್ತಿ, ಎಸ್‌ಡಿಎಂಸಿ, ಮಕ್ಕಳ ಗ್ರಾಮ ಸಭೆ ಮತ್ತು ನಾಗರಿಕ ಸೇವಾ ಸೌಲಭ್ಯ ಸಮಿತಿ (ಸಿಎಸಿ) ಮನಸ್ಸು ಮಾಡಿದರೆ ಎಂತಹ ಸಕಾರಾತ್ಮಕ ಫಲಿತಾಂಶ ಪಡೆಯಬಹುದು ಎನ್ನುವುದಕ್ಕೆ ಇಲ್ಲಿನ ಘಟನೆಗಳು ಜೀವಂತ ಉದಾಹರಣೆಗಳು.

1) ಮಿಟ್ಟಿಮಲ್ಕಾಪುರ: ಸ್ವಚ್ಛ-ಸುಂದರ ಶಾಲೆ

2) ಮಿಟ್ಟಿಮಲ್ಕಾಪುರ: ದಕ್ಕಿತು ಕುಡಿಯುವ ನೀರು

3) ಅರಷಿಣಗಿ: ನೀಗಿದ ಬಾಯಾರಿಕೆ

4) ಪಲ್ಕಂದೊಡ್ಡಿ: ಸವಾಂರ್ಗೀಣ ಅಭಿವೃದ್ಧಿ

5) ಲಿಂಗನಖಾನದೊಡ್ಡಿ: ಹನಿ ಹನಿಯೂ ಅಮೂಲ್ಯ

# ಮಿಟ್ಟಿಮಲ್ಕಾಪುರ: ಸ್ವಚ್ಛ-ಸುಂದರ ಶಾಲೆ

ಕೆಲವು ತಿಂಗಳ ಹಿಂದಿನ ಮಾತು. ರಾಯಚೂರು ತಾಲ್ಲೂಕಿನ ಮಿಟ್ಟಿಮಲ್ಕಾಪುರದಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ದುರ್ಗತಿಯ ಸಂಕೇತವಾಗಿ ಕಣ್ಣ ಮುಂದೆ ನಿಂತಿತ್ತು. ಬದಲಾವಣೆಯ ಗಾಳಿ ಬೀಸುವ ಮೊದಲು ಈ ಶಾಲೆ ಅಕ್ಷರಶಃ ಊರಿನವರ ಪಾಲಿನ ತಿಪ್ಪೆಯಾಗಿತ್ತು. ಶಾಲೆಯ ಸುತ್ತಮುತ್ತ ಎಲ್ಲಿ ನೋಡಿದರೂ ಕಸ-ಕಡ್ಡಿ, ಹೊಲಸು ತುಂಬಿ ನಿಂತಿದ್ದವು. ಅದರ ಜೊತೆಯಲ್ಲಿ ದಟ್ಟವಾಗಿ ಹರಡಿ ನಿಂತಿದ್ದ ಮುಳ್ಳಿನ ಪೊದೆಗಳು. ಅಷ್ಟು ಸಾಲದು ಎನ್ನುವಂತೆ ಹಂದಿಗಳ ಸಾಮ್ರಾಜ್ಯ. ಈ ಶಾಲೆ ಮತ್ತು ಅದರ ಸುತ್ತಲಿನ ವಾತಾವರಣ ಎಳೆಯ ವಿದ್ಯಾರ್ಥಿಗಳ ಪಾಲಿಗೆ ನರಕವೇ ಆಗಿತ್ತು. ಅಂತಹ ನರಕದ ನಡುವೆಯೇ ಆ ಮಕ್ಕಳ ಆಟ-ಪಾಟ, ಜೀವನ ಎಲ್ಲವೂ ನಿರಂತರವಾಗಿ ಮುಂದುವರಿದಿತ್ತು.



**ಎಸ್‌ಡಿಎಂಸಿ ಸಭೆ:**

17 ಸೆಪ್ಟೆಂಬರ್, 2010ರಂದು ನಡೆದ ಎಸ್‌ಡಿಎಂಸಿ ಸಭೆಯಲ್ಲಿ ಶಾಲೆಯ ದುಸ್ಥಿತಿ ಹಾಗೂ ಕೆಟ್ಟ ವಾತಾವರಣದ ಬಗ್ಗೆ ಚರ್ಚೆ ಮಾಡುವಂತೆ ಪ್ರೇರೇಪಿಸಲಾಯಿತು. ಅಲ್ಲಿಯವರೆಗೆ ಕಣ್ಣಿಗೆ ಕಂಡರೂ ಕಾಣದಂತಿದ್ದ ಆ ಸಮಸ್ಯೆಗಳ ಬಗ್ಗೆ ಸಭೆಯಲ್ಲಿ ಗಂಭೀರ ಚರ್ಚೆಗಳಾದವು. ಶಾಲೆ ಮತ್ತು ಸುತ್ತಲಿನ ಪರಿಸರದ ದುರ್ಗತಿಯ ಬಗ್ಗೆ ಗಂಭೀರ ಚಿಂತನೆಗಳು ನಡೆದವು. ತಕ್ಷಣ ಈ ಕುರಿತು ಕ್ರಮ ಕೈಗೊಂಡು ಎಲ್ಲ ಸಮಸ್ಯೆಗಳನ್ನು ಪರಿಹರಿಸುವ ನಿರ್ಧಾರವನ್ನು ಸಭೆಯಲ್ಲಿ ತೆಗೆದುಕೊಳ್ಳಲಾಯಿತು.

**ಫಲಿತಾಂಶ:** ಕೇವಲ ಒಂದೇ ವಾರ. ಎಸ್‌ಡಿಎಂಸಿ ಅಧ್ಯಕ್ಷರಾದ ಮಹದೇವ ಮತ್ತು ಸದಸ್ಯರು ಜವಾಬ್ದಾರಿ ಹೊತ್ತು ಶಾಲೆಯ ಪರಿಸರವನ್ನು ಸಂಪೂರ್ಣವಾಗಿ ಸ್ವಚ್ಛಗೊಳಿಸಿದರು. ಸ್ಥಳೀಯ ಗುತ್ತಿಗೆದಾರ ಶಿವಾನಂದ ಜೆಲ್ಲಿ ಮತ್ತು ಜೆಲ್ಲಿ ಪುಡಿಯನ್ನು ನೀಡಿದರು. ಅವನ್ನು ಹರಡಿ ಆವರಣವನ್ನು ಹದ ಮಾಡಲಾಯಿತು. ಅದೇ ವೇಳೆ ಶಾಲೆಯ ಆವರಣದಲ್ಲಿ 30 ಸಸಿಗಳನ್ನು ನೆಟ್ಟು ಬೇಲಿ ಹಾಕಲಾಯಿತು. ಒಟ್ಟು ರೂ.8000 ಖರ್ಚು ಮಾಡಿ ಒಟ್ಟಾರೆ ಶಾಲೆಯ ವಾತಾವರಣವನ್ನೇ ಬದಲಿಸುವಲ್ಲಿ ಸ್ಥಳೀಯರು ಯಶಸ್ವಿಯಾದರು. ಎಲ್ಲವೂ ಕೇವಲ ಒಂದೇ ವಾರದಲ್ಲಿ ಆದ ಬದಲಾವಣೆ.

# ಮಿಟ್ಟಿಮಲ್ಲಾಪುರ: ದಕ್ಕಿತು ಕುಡಿಯುವ ನೀರು

ಮಿಟ್ಟಿಮಲ್ಲಾಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಗೋಳು ಅಷ್ಟಕ್ಕೆ ಸೀಮಿತವಾಗಿರಲಿಲ್ಲ. ಮೇಲಿನೆಲ್ಲ ಸಮಸ್ಯೆಗಳ ಜೊತೆಗೆ ಆ ಶಾಲೆಯ ಮಕ್ಕಳಿಗೆ ಶುದ್ಧ ಕುಡಿಯುವ ನೀರು ಲಭ್ಯವಾಗುತ್ತಿರಲಿಲ್ಲ. ಅದು ಮೇಲಿನೆಲ್ಲ ಸಮಸ್ಯೆಗಳಿಗಿಂತ ಅತ್ಯಂತ ಗಂಭೀರವಾದ ಸಮಸ್ಯೆಯಾಗಿತ್ತು.

**ಎಸ್‌ಡಿಎಂಸಿ ಸಭೆ:** ಮೇಲಿನ ಸಭೆಯಲ್ಲಿ ಶುದ್ಧ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಕೂಡ ಬಿಸಿ–ಬಿಸಿ ಚರ್ಚೆಯಾಯಿತು. ವಿಪರ್ಯಾಸವೆಂದರೆ ಶಾಲೆಯ ಆವರಣದಲ್ಲಿಯೇ ಶುದ್ಧ ಕುಡಿಯುವ ನೀರಿನ ಲಭ್ಯತೆಯಿತ್ತು. ಆದರೆ, ಸರಿಯಾದ ರೀತಿಯಲ್ಲಿ ಕೊಳವೆಗಳನ್ನು ಹಾಕಿ, ಅದಕ್ಕೊಂದು ನಲ್ಲಿಯನ್ನು ಹಾಕುವ ಯತ್ನ ಯಾರೂ ಮಾಡಿರಲಿಲ್ಲ. ಇದರಿಂದಾಗಿ ವಿಚಿತ್ರ ಪರಿಸ್ಥಿತಿಯೊಂದು ನಿರ್ಮಾಣವಾಗಿತ್ತು. ಮಧ್ಯಾಹ್ನ ಬಿಸಿಯೂಟ ಹಾಕಿದ ಕೂಡಲೇ ನೀರು ಕುಡಿಯುವ ನೆಪದಲ್ಲಿ ಮಕ್ಕಳು ಅವರವರ ಮನೆಗಳಿಗೆ ವಾಪಸಾಗಿ ಬಿಡುತ್ತಿದ್ದರು. ಆ ಪೈಕಿ ಹೆಚ್ಚಿನವರು ಮಧ್ಯಾಹ್ನಾನಂತರ ಮರಳಿ ಶಾಲೆಗೆ ಬರುತ್ತಲೇ ಇರಲಿಲ್ಲ. ಇದು ನೀರು ಸೃಷ್ಟಿಸಿದ ಜ್ವಲಂತ ಸಮಸ್ಯೆ. ಸಭೆಯಲ್ಲಿ ಈ ಎಲ್ಲ ವಿಷಯಗಳು ಹೊರಬಿದ್ದ ಮೇಲೆ ತತ್‌ಕ್ಷಣ ಕ್ರಮ ಕೈಗೊಳ್ಳುವ ನಿರ್ಧಾರ ಕೈಗೊಳ್ಳಲಾಯಿತು.



**ಫಲಿತಾಂಶ:** ಎಸ್‌ಡಿಎಂಸಿ ಸಭೆಯಲ್ಲಿ ಭರವಸೆ ನೀಡಿದಂತೆಯೇ ಗ್ರಾಮ ಪಂಚಾಯ್ತಿ ಸದಸ್ಯರು ತಕ್ಷಣ ಕ್ರಮಕೈಗೊಂಡರು. ಗ್ರಾಮ ಪಂಚಾಯ್ತಿ ಅನುದಾನ ಬಳಸಿ ಅಗತ್ಯವಾದ ಕೊಳವೆ ಹಾಗೂ ನಲ್ಲಿಯನ್ನು ಹಾಕಿಸಿಕೊಟ್ಟರು. ಪರಿಣಾಮ ಶಾಲೆಯ ಆವರಣದಲ್ಲಿಯೇ ಮಕ್ಕಳಿಗೆ ಶುದ್ಧ ಕುಡಿಯುವ ನೀರು ದೊರಕುವಂತಾಗಿದೆ. ಈಗ ಮಧ್ಯಾಹ್ನದ ನಂತರ ಕೂಡ ಎಳೆಯ ವಿದ್ಯಾರ್ಥಿಗಳು ಶಾಲೆಯಲ್ಲಿಯೇ ಇರುತ್ತಾರೆ. ಬಿಸಿಯೂಟ ಬಡಿಸಿದ ನಂತರ ಕೂಡ ಆಟಪಾಟ ಜೋರಾಗಿಯೇ ನಡೆಯುತ್ತಿದೆ.

# ಅರಿಷಿಣಗಿ: ನೀಗಿದ ಬಾಯಾರಿಕೆ

ರಾಯಚೂರ ತಾಲ್ಲೂಕು ಕಡ್ಲೂರು ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಬರುವ ಹಳ್ಳಿಗಳ ಸಂಖ್ಯೆ ಏಳು. ರಂಗಾಪುರ, ಬೇವಿನಬೆಂಚಿ, ಕಡ್ಲೂರು, ಎಚ್ ತಿಮ್ಮಾಪುರ, ಅರಿಷಿಣಗಿ ಮತ್ತು ಗುರ್ಜಾಪುರ ಈ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಸೇರಿವೆ. ಸ್ಥಳೀಯ ಗ್ರಾಮ ಪಂಚಾಯ್ತಿ ಅಧ್ಯಕ್ಷರ ನೇತೃತ್ವದಲ್ಲಿ ಒಮ್ಮೆ ಮಕ್ಕಳ ಗ್ರಾಮ ಸಭೆಯನ್ನು ಏರ್ಪಡಿಸಲಾಗಿತ್ತು. ಎಲ್ಲ ಶಾಲೆಗಳ ಎಸ್‌ಡಿಎಂಸಿ ಸದಸ್ಯರು, ಶಾಲಾ ಮುಖ್ಯೋಪಾಧ್ಯಾಯರು, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮತ್ತು ಅಧ್ಯಕ್ಷರು ಸಭೆಯಲ್ಲಿ ಭಾಗವಹಿಸಿದ್ದರು. ಜೊತೆಯಲ್ಲಿ ಮಕ್ಕಳ ಪ್ರತಿನಿಧಿಗಳಿದ್ದರು.



**ಮಕ್ಕಳ ಗ್ರಾಮ ಸಭೆ:** ನವೆಂಬರ್ 30, 2010ರಂದು ಈ ಸಭೆ ಆರಂಭವಾದಾಗ ಯಾರೂ ಬಹಳಷ್ಟನ್ನು ನಿರೀಕ್ಷಿಸಿರಲಿಲ್ಲ. ಆದರೆ, ಸಭೆಯಲ್ಲಿ ಕ್ರಮೇಣ ಮಕ್ಕಳ ಪ್ರತಿನಿಧಿಗಳು ಗಂಭೀರ ಸಮಸ್ಯೆಗಳನ್ನು ಪ್ರಸ್ತಾಪ ಮಾಡಲಾರಂಭಿಸಿದರು. ಪಂಚಾಯ್ತಿ ವ್ಯಾಪ್ತಿಯಲ್ಲಿ ಬರುವ ಅರಷಿಣಗಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕುಡಿಯುವ ನೀರು ಸರಬರಾಜು ಮಾಡಲು ಒಂದು ಟ್ಯಾಂಕ್ ಇತ್ತು. ಆದರೆ, ಅದನ್ನು ಸ್ವಚ್ಛ ಮಾಡದೇ ಹಾಳುಗೆಡವಲಾಗಿತ್ತು. ಪರಿಣಾಮ ಮಕ್ಕಳಿಗೆ ಶುದ್ಧ ಕುಡಿಯುವ ನೀರು ಲಭ್ಯವಾಗುತ್ತಿರಲಿಲ್ಲ. ಜೊತೆಗೆ, ಬಿಸಿಯೂಟ ತಯಾರಿಸಲು ಕೂಡ ನೀರು ಇರುತ್ತಿರಲಿಲ್ಲ. ಎರಡೂ ಸಂದರ್ಭಗಳಲ್ಲಿ ಬಹಳ ದೂರ ಹೋಗಿ ನೀರನ್ನು ತರಬೇಕಾಗುತ್ತಿತ್ತು. ಸಭೆಯಲ್ಲಿ ಈ ಸಮಸ್ಯೆಗೆ ತಕ್ಷಣ ಪರಿಹಾರ ಒದಗಿಸಬೇಕು ಎಂಬ ಒಕ್ಕೊರಲಿನ ಒತ್ತಾಯ ಕೇಳಿಬಂತು.

**ಫಲಿತಾಂಶ:** ಪುಟ್ಟ ಮಕ್ಕಳ ಆ ಭಾರಿ ದನಿ ಫಲ ನೀಡಿತು. ಸಭೆಯಲ್ಲಿದ್ದ ಹಿರಿಯರು ಸಮಸ್ಯೆಯನ್ನು ಗಂಭೀರವಾಗಿ ತೆಗೆದುಕೊಂಡು ಪಂಚಾಯ್ತಿ ಅನುದಾನದ ಮೂಲಕ ಕುಡಿಯುವ ನೀರಿನ ಟ್ಯಾಂಕ್ ಸ್ವಚ್ಛಗೊಳಿಸಿ, ರಿಪೇರಿ ಕೂಡ ಮಾಡಿಸಿದರು. ಅದರೊಂದಿಗೆ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛ ಕೂಡ ಮಾಡಲಾಯಿತು. ಜೊತೆಗೆ 30 ಸಸಿಗಳನ್ನು ನೆಟ್ಟು ಹಸಿರಿನ ಆಶಾಭಾವನೆ ಹರಡುವಂತೆ ಮಾಡಿದರು. ಇದೆಲ್ಲವೂ ನಡೆದದ್ದು ಕೇವಲ 45 ದಿನಗಳೊಳಗೆ. ಕಣ್ಣಿಗೆ ಬಿದ್ದ ಒಂದು ಸಮಸ್ಯೆ ಶಾಲೆಯ ಉಳಿದೆಲ್ಲ ಸಮಸ್ಯೆಗಳಿಗೆ ಕೂಡ ಪರಿಹಾರ ನೀಡಿದ್ದು ಇಲ್ಲಿನ ವಿಶೇಷ.

# ಪಲ್ಕಂದೊಡ್ಡಿ: ಸರ್ವಾಂಗೀಣ ಅಭಿವೃದ್ಧಿ

ರಾಯಚೂರು ತಾಲ್ಲೂಕಿನ ಶಾಖವಾದಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಬರುವ ಪಲ್ಕಂದೊಡ್ಡಿ ಪುಟ್ಟ ಹಳ್ಳಿ. ಉಳಿದೆಲ್ಲೆಡೆಯಂತೆ ಇಲ್ಲಿನ ಹಿರಿಯ ಪ್ರಾಥಮಿಕ ಶಾಲೆ ಕೂಡ ಎಲ್ಲ ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿದ್ದ ಸಮಯವೊಂದಿತ್ತು. ಆಗಸ್ಟ್ 18, 2010ರಂದು ನಡೆದ ನಾಗರಿಕ ಸೇವಾ ಸೌಲಭ್ಯ ಸಮಿತಿ (ಸಿಎಸಿ) ಸಭೆ ಆ ಶಾಲೆಯ ಚಿತ್ರವನ್ನು ಬದಲಾಯಿಸುವಲ್ಲಿ ಯಶಸ್ವಿಯಾಯಿತು. ಗ್ರಾಮ ಪಂಚಾಯ್ತಿ ಅಧ್ಯಕ್ಷರ ಸಮ್ಮುಖದಲ್ಲಿ ನಡೆದ ಆ ಸಭೆಯಲ್ಲಿ ಪಂಚಾಯ್ತಿ ಸದಸ್ಯರು, ಶಾಲಾ ಮುಖ್ಯೋಪಾಧ್ಯಾಯರು, ಪಂಚಾಯ್ತಿ ಸದಸ್ಯರು, ಎಸ್‌ಡಿಎಂಸಿ ಸದಸ್ಯರು ಹಾಗೂ ಶಾಲಾ ಮಕ್ಕಳು ಭಾಗವಹಿಸಿದ್ದರು.



**ಸಿಎಸಿ ಸಭೆ:** ಪಲ್ಕಂದೊಡ್ಡಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಪರಿಶುದ್ಧ ಕುಡಿಯುವ ನೀರು ಲಭ್ಯವಿರಲಿಲ್ಲ. ಆಟದ ಮೈದಾನ ಹುಡುಕಬೇಕಾಗಿತ್ತು. ಇಡೀ ಶಾಲೆಯ ಆವರಣ ಕಸದ ತೊಟ್ಟಿಯಾಗಿ ಪರಿವರ್ತನೆಗೊಂಡು ನಿಂತಿತ್ತು. ಈ ಎಲ್ಲ ಅಂಶಗಳನ್ನು ಗಣನೆಗೆ ತೆಗೆದುಕೊಂಡ ಸಭೆ ಶಾಲೆಯ ಸರ್ವಾಂಗೀಣ ಅಭಿವೃದ್ಧಿಯೇ ಎಲ್ಲಕ್ಕೂ ಪರಿಹಾರ ಎಂಬ ನಿರ್ಧಾರಕ್ಕೆ ಬಂತು.



**ಫಲಿತಾಂಶ:** ಮೂವತ್ತು ದಿನಗಳ ಗಡುವು ಹಾಕಿಕೊಂಡು, ಗ್ರಾಮ ಪಂಚಾಯ್ತಿ ಅನುದಾನ ಪಡೆದು ಕೆಲಸ ಆರಂಭ ಮಾಡಲಾಯಿತು. ಮೊದಲು ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛ ಮಾಡಲಾಯಿತು. ಕುಡಿಯುವ ನೀರಿನ ಟ್ಯಾಂಕ್ ರಿಪೇರಿ ಮಾಡಿ, ಸ್ವಚ್ಛಗೊಳಿಸಲಾಯಿತು. ಆಟದ ಮೈದಾನವನ್ನು ನುಂಗಿ ಹಾಕಿದ್ದ ಪೊದೆಗಳನ್ನು ಕಿತ್ತುಹಾಕಿದರು. 30 ಸಸಿಗಳನ್ನು ಆಟದ ಮೈದಾನದ ಅಂಚಿನಲ್ಲಿ ನೆಡಲಾಯಿತು. ಸಭೆಯಲ್ಲಿ ತೀರ್ಮಾನ ಕೈಗೊಂಡಂತಹ ಪ್ರತಿಯೊಂದು ನಿರ್ಧಾರಗಳು ಗಡುವಿನ ಅವಧಿಯೊಳಗೆ ಕಾರ್ಯಗತವಾಗಿ ಹೋದವು. ಈಗ ಪಲ್ಕಂದೊಡ್ಡಿಯ ಶಾಲೆ ಫಳ-ಫಳ ಹೊಳೆಯುತ್ತಿದೆ.

# ಲಿಂಗನಖಾನದೊಡ್ಡಿ: ಹನಿ, ಹನಿಯೂ ಅಮೂಲ್ಯ

ಕೆಲವು ತಿಂಗಳ ಹಿಂದಿನವರೆಗೆ ಲಿಂಗನಖಾನದೊಡ್ಡಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಒಂದೊಂದು ಹನಿ ಶುದ್ಧ ಕುಡಿಯುವ ನೀರನ್ನು ಲೆಕ್ಕ ಹಾಕಲಾಗುತ್ತಿತ್ತು. ಶಾಲೆಯ ಪಕ್ಕದಲ್ಲಿಯೇ ಇದ್ದ ಗ್ರಾಮ ಪಂಚಾಯ್ತಿ ಆವರಣದಲ್ಲಿ ಒಂದು ಕೊಳವೆ ಬಾವಿಯಿತ್ತು. ಶಾಲಾ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಯ ಪಾಲಿಗೆ ಆ ಕೊಳವೆ ಬಾವಿಯೇ ಭಗೀರಥನಾಗಿತ್ತು. ಇದ್ದಕ್ಕಿದ್ದಂತೆ ಕೊಳವೆ ಬಾವಿ ಹಾಳಾಯಿತು. ಹನಿ, ಹನಿ ನೀರಿಗೂ ಹಾಹಾಕಾರ ಎದ್ದಿತು.

**ಎಸ್‌ಡಿಎಂಸಿ ಸಭೆ:** ಆಗಸ್ಟ್ 16, 2010ರಲ್ಲಿ ನಡೆದ ಶಾಲಾ ಎಸ್‌ಡಿಎಂಸಿ ಸಭೆಯಲ್ಲಿ ಜಲಜ್ವಾಲೆ ಹತ್ತಿಕೊಂಡಿತು. ಎಳೆಯ ಮಕ್ಕಳು ಹನಿ, ಹನಿ ನೀರಿಗೆ ಒದ್ದಾಡುತ್ತಿದ್ದರೂ ಯಾರೂ ಅತ್ತ ಗಮನ ಹರಿಸುತ್ತಿಲ್ಲ ಎಂದು ಪೋಷಕರು ಆಕ್ರೋಶ ವ್ಯಕ್ತಪಡಿಸಿದರು. ನೀರಿನ ಬಗ್ಗೆ ಬಿಸಿ–ಬಿಸಿ ಚರ್ಚೆಯಾಗಿ ತಕ್ಷಣ ಪರಿಹಾರ ಕಾರ್ಯ ಕೈಗೊಳ್ಳುವ ನಿರ್ಧಾರ ಮಾಡಲಾಯಿತು.



**ಫಲಿತಾಂಶ:** ಜವಾಬ್ದಾರಿಯ ಹೊರೆ ಹೊತ್ತ ಗ್ರಾಮ ಪಂಚಾಯ್ತಿ ಅಧ್ಯಕ್ಷ ನರಸಿಂಹುಲು ಅನುದಾನ ಬಿಡುಗಡೆ ಮಾಡಿಸಿದರು. ಗ್ರಾಮ ಪಂಚಾಯ್ತಿ ಆವರಣದಲ್ಲಿದ್ದ ಕೊಳವೆ ಬಾವಿ ರಿಪೇರಿಯಾಯಿತು. ದುರಂತವೆಂದರೆ ಒಂದೇ ತಿಂಗಳಲ್ಲಿ ಅದು ಮತ್ತೆ ಹಾಳಾಯಿತು. ಮತ್ತದೇ ಪರಿಸ್ಥಿತಿ. ನವೆಂಬರ್ 23, 2010ರಂದು ನಡೆದ ಮಕ್ಕಳ ಗ್ರಾಮಸಭೆಯಲ್ಲಿ ಮತ್ತೆ ಜಲಜ್ವಾಲೆ. ಸಭೆಯಲ್ಲಿ ಹಾಜರಿದ್ದ ಮಕ್ಕಳ ಪ್ರತಿನಿಧಿಗಳು ತಕ್ಷಣ ಕೊಳವೆ ರಿಪೇರಿ ಮಾಡಿಸಬೇಕು ಎಂದು ಹಕ್ಕೊತ್ತಾಯ ಮಂಡಿಸಿದರು. ಗ್ರಾಮ ಪಂಚಾಯ್ತಿಯ ಮೇಲೆ ತೀವ್ರ ಒತ್ತಡ ಹೇರಲಾಯಿತು. ಮೊದಲು ಮೊಂಡುತನ ತೋರಿದ ಗ್ರಾಮ ಪಂಚಾಯ್ತಿ ಒತ್ತಡಕ್ಕೆ ಮಣಿದು, ಕೊಳವೆ ಬಾವಿಯನ್ನು ಮತ್ತೆ ರಿಪೇರಿ ಮಾಡಿಸಿತು. ಈಗ ನೀರಡಿಕೆಯಾದಾಗಲೆಲ್ಲ ಆ ಎಳೆಯ ಜೀವಗಳು ಗ್ರಾಮ ಪಂಚಾಯ್ತಿ ಆವರಣದೊಳಕ್ಕೆ ಧಾವಿಸುತ್ತವೆ. ಒಂದು ಜೀವ ಕೊಳವೆ ಬಾವಿಯ ಮುಂದೆ ಕೈಯೊಡ್ಡಿ ಕೂತರೆ, ಮತ್ತೊಂದು ಜೀವ ಹಿಂದೆ ನಿಂತು ಭುವಿಯಾಳದಿಂದ ನೀರನ್ನು ಮೇಲೆತ್ತುವ ಕಾಯಕದಲ್ಲಿ ಮಗ್ನವಾಗುತ್ತದೆ.